ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಫೈನ್ಯಾನ್ಷಿಯರ್ ಸಾಲು ಮುಗಿಯಲು ನಾಲ್ಕೈದು ತಿಂಗಳು ಮಾತ್ರ ಉಳಿದಿವೆ. ಅದರೊಳಗಾಗಿ ಈ ಕೆಲಸಗಳು ಮುಗಿಯುತ್ತವೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಆದಷ್ಟು ಬೇಗ ತರ ದೂದು ಮಾಡಿ ಕೆಲಸಮಾಡಬೇಕೆಂದು ಹೇಳಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಆ ರೀತಿ ಮಾಡುವಂತೆ ಒತ್ತಾಯ ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ತೀವ್ರಗತಿಯಿಂದ ಕೆಲಸಮಾಡಬೇಕೆಂದು ಹೇಳಿದೆ.

ಶ್ರೀ ಎಸ್. ಸಿದ್ದಪ್ಪ.—ಕೆಲಸ ನಡೆದು ಬಹಳ ದಿವಸಗಳಾದರೂ ಕಂಟ್ರಾಕ್ಟರುಗಳಿಗೆ ಜಾಸ್ತಿ ಬಿಲ್ ಪಾಸ್ ಮಾಡಿ ಹಣ ಪಾವತಿ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿಲ್ಲ.

Building of Taluk Office, Kunigal.

Q.—498. **Sri T. N. MUDALAGIRI GOWDA** (Kunigal).—

Will the Government be pleased to state :—

(*a*) when the work relating to the building of the Taluk Office, Kunigal, had been given on tender basis ;

(*b*) the amount for which the tender had been accepted;

(*c*) the number of times this estimate was revised ; the years in which it was revised and the reasons therefor ;

(*d*) the extent on this account to which the tender amount has exceeded ?

A.—**Sri Kadidal MANJAPPA** (Minister for Revenue and Public Works).—

(*a*) In 1947.

(*b*) Rs. 56,193 for the work portion.

(*c*) The revised estimate is come for the first time and is under consideration though enhanced rates were sanctioned in respect of some items earlier.

(*d*) Rs. 8,631 on account of paying enhanced rates.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಇದರ ಅಂದಾಜಿನ ಮೊಬಲಗೆಷ್ಟು?

*ಶ್ರೀ ಕಡಿದಾಳ್ ಮಂಜಪ್ಪ.—85 ಸಾವಿರ ರೂಪಾಯಿಗಳು.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಯಾವ ಯಾವ ಬಾಬುಗಳಿಗಾಗಿ ಈ ಅಂದಾಜಿನಲ್ಲಿ ಹೆಚ್ಚು ಹಣ ಒದಗಿಸಲಾಗಿದೆ?

Sri Kadidal MANJAPPA.—Teak Wood, R.C.C. Jajja, R.C.C. Beams, roofing, white-washing, green painting, flooring.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಟೆಂಡರಿನಲ್ಲಿ ಇದನ್ನೆಲ್ಲಾ ಸೇರಿಸಿತ್ತೀರ?

ಶ್ರೀ ಕಡಿದಾಳ್ ಮಂಜಪ್ಪ.—ಸೇರಿಸಿತ್ತು. ಆದರೆ ಕೆಲಸಮಾಡುವುದಕ್ಕೆ ಸಾಧ್ಯವಿಲ್ಲ, ದರ ಗಿಟ್ಟುವುದಿಲ್ಲ ಎಂದು ಹೇಳಿದ್ದರಿಂದ 1951ರಲ್ಲಿ ದರ ಜಾಸ್ತಿಮಾಡಿದೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಗಿಟ್ಟುವುದಿಲ್ಲವೆಂದು ಹೇಳಿದ್ದನ್ನು ಯಾವ ಆಧಾರದಮೇಲೆ ಒಪ್ಪಿದಿರಿ?

ಶ್ರೀ ಕಡಿದಾಳ್ ಮಂಜಪ್ಪ.—ದರ ಗಿಟ್ಟುವುದಿಲ್ಲವೆಂದು ಹೇಳಿದಮೇಲೆ ಕೆಲಸ ನಿಲ್ಲಿಸಿದ್ದರಿಂದ ದರ ಹೆಚ್ಚಿಸಿದೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ದರ ಹೆಚ್ಚಾಗಿ ಪಡೆಯುವುದಕ್ಕೆ ತಾನೆ ಕೆಲಸ ನಿಲ್ಲಿಸುವುದು?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಹೇಳುವುದಕ್ಕಾಗುವುದಿಲ್ಲ. ಆಗ ಬಾಕಿಕಡೆಗಳಲ್ಲಿ ಅದೇ ವಿಧವಾದ ಕೆಲಸಕ್ಕೆ ಯಾವ ದರವಿದೆ ಮತ್ತು ಆ ದರ ರಾಭದಾಯಕವಾಗಿದೆಯೆ ಎಂಬುದನ್ನು ವಿಚಾರಮಾಡಿ ಸರ್ಕಾರದವರು ಜಾಸ್ತಿಮಾಡಿದ್ದಾರೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಟೆಂಡರನ್ನು ಒಪ್ಪುವಾಗ ಇದನ್ನೆಲ್ಲಾ ಪರಿಶೀಲಿಸಿ ತಾನೆ ಒಪ್ಪಿಕೊಳ್ಳುವುದು?

ಶ್ರೀ ಕಡಿದಾಳ್ ಮಂಜಪ್ಪ.—ಕಾನೂನಿರುವುದು ಸಾಮಾನ್ಯವಾಗಿ ಟೆಂಡರನ್ನು ಒಪ್ಪಿದಮೇಲೆ ದರ ಜಾಸ್ತಿಮಾಡಬಾರದು ಎಂದು.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಈಗ ಒಟ್ಟು ಎಷ್ಟು ಹಣ ಖರ್ಚಾಗಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಚೀಫ್ ಇಂಜನಿಯರಿಂದ 1,11,786 ರೂಪಾಯಿಗಳಿಗೆ ತಿದ್ದುಪಾಟಾದ ಅಂದಾಜು ಬಂದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಈ ತರಹ ತಿದ್ದುಪಾಟು ಮಾಡುವ ಒಂದು ನೀತಿಯಿಂದ ಹೆಚ್ಚು ಮೊಬಲಗು ಖರ್ಚಾಗುತ್ತಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇತ್ತೀಚೆಗೆ ಸುಮಾರು ಒಂದು ವರ್ಷದ ಹಿಂದೆ ಕೆಲಸಗಳನ್ನು ಟೆಂಡರು ಮೂಲಕ ಕೊಟ್ಟಿದ್ದರೆ ದರ ಜಾಸ್ತಿ ಮಾಡಬಾರದೆಂದು ಒಂದು ಸರ್ಕ್ಯುಲರ್ ಕಳುಹಿಸಿದೆ.

ಶ್ರೀ ಎಸ್. ಸಿದ್ದಪ್ಪ.—ಕಂಟ್ರಾಕ್ಟರುಗಳಿಗೆ ಸರ್ಕಾರ ಗೊತ್ತುಮಾಡಿರುವ ದರಕ್ಕಿಂತ ಯಾವ ಕಾರಣದಿಂದಲೂ ಹೆಚ್ಚಾಗಿ ಕೊಡಬಾರದೆಂದು ಬಹಳ ಕಾಲದಿಂದ ವಿಧಾಯಕವಾಗಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಕೊಡಬಾರದೆಂದು ಸಾಮಾನ್ಯವಾಗಿ ಹೇಳಿದೆ. ಆದರೆ ಕೆಲವು ಸಂದರ್ಭಗಳಲ್ಲಿ ನ್ಯಾಯವಾದ ಕಾರಣಗಳಿಗಾಗಿ ದರವನ್ನು ತಿದ್ದುಪಾಟುಮಾಡುತ್ತಿದ್ದೇವೆ.

Mavathur Tank in Koratagere Taluk.

Q.—518. **Sri MUDDURAMIAH** (Koratagere-Madhugiri).—

Will the Government be pleased to state :—

(*a*) whether Government have thought of increasing the capacity of Mavathur Tank in Koratagere Taluk by one foot;

(*b*) if so, the additional extent of land that is expected to come under cultivation ?

A.—Sri Kadidal MANJAPPA (Minister for Revenue and Public Works).—

(*a*) No.

(*b*) Does not arise.

ಶ್ರೀ ಮುದ್ದುರಾಮಯ್ಯ.—ಕೆರೆ ಹಿಂಭಾಗದಲ್ಲಿ ಇದಕ್ಕೆ ಸೇರಿರುವ ಅಚ್ಚುಕಟ್ಟೆಪ್ರದೆ ?

*ಶ್ರೀ ಕಡಿದಾಳ್ ಮಂಜಪ್ಪ.—2,700 ಎಕರೆ ನೀರಾವರಿಯಾಗಬಹುದೆಂಬ ನಿರೀಕ್ಷೆಯಿತ್ತು. ಆದರೆ ಪೂರ್ತಿ ಅಚ್ಚುಕಟ್ಟು ಇನ್ನೂ ಡೆವಲಪ್ ಆಗಿಲ್ಲ.

ಶ್ರೀ ಮುದ್ದುರಾಮಯ್ಯ.—ಇದಕ್ಕಿರುವ ಕ್ಯಾಚ್ ಮೆಂಟ್ ಏರಿಯಾ ಎಷ್ಟು ?

Sri Kadidal MANJAPPA.—I have no idea.

ಶ್ರೀ ಮುದ್ದುರಾಮಯ್ಯ.—ಈ ರೀತಿ ಒಂದು ಅಡಿ ಉತ್ತಾವಣೆ ಮಾಡುವುದರಿಂದ ಒಂದು ಸಾವಿರ ಎಕರೆ ಹೆಚ್ಚಾಗಿ ತರೀ ಸಾಗುವಳಿಗೆ ಬರಬಹುದೆಂದು ಜನಾಭಿಪ್ರಾಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

Sri Kadidal MANJAPPA.—But, technical opinion is against increasing the capacity of the Tank.

Ane to Kallakatte Halla near Hullepura, Gundlupet Taluk, (Construction).

Q.—566. Sri H. K. SHIVARUDRAPPA (Gundlupet-Heggaddevankote).—

Will the Government be pleased to state:—

(*a*) (i) whether an estimate has been prepared for the construction of an *ane* to the Kallakatte halla near Hullepura in Gundlupet Taluk;

(ii) if so, the amount of the estimate;

(*b*) (i) the estimated extent of land that could come under irrigation from this *anekat*;

(ii) out of that the extent that has been brought under wet cultivation already; and

(iii) the extent that would be submerged;

(*c*) whether this would be included in the First Five-Year Plan ?

A.—Sri Kadidal MANJAPPA (Minister for Revenue and Public Works).—

(*a*) (i) Yes.

(ii) Rs. 1·47 lakhs.

(*b*) (i) 300 acres.

(ii) Nil.

(iii) 26 acres and 36 guntas.

(*c*) No, as the works for the First Five-Year Plan are already finalised.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈ ಅಂದಾಜು ಮಂಜೂರಾಗಿದೆಯೇ ?

*Sri Kadidal MANJAPPA.—The project is under scrutiny.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈ ಅಂದಾಜು ಆದುದು ಯಾವಾಗ ?

Sri Kadidal MANJAPPA.—The date is not available. Probably recently.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈ ಯೋಜನೆಯನ್ನು ಯಾವಾಗ ಕೈಗೊಳ್ಳಲು ಸಾಧ್ಯವೆಂಬುದನು ತಿಳಿಸಬಲ್ಲರಾ?

Sri Kadidal MANJAPPA.—In the absence of technical details I cannot say anything definitely.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಗುಂಡ್ಲುಪೇಟೆ ತಾಲ್ಲೂಕು ನೀರಾವರಿ ತಾಲ್ಲೂಕು ಎಂದು ಪರಿಗಣಿಸಲು ಸಾಧ್ಯವಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

Sri Kadidal MANJAPPA.—It applies to many other taluks.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಗುಂಡ್ಲುಪೇಟೆ ತಾಲ್ಲೂಕಿನ ಬಗ್ಗೆ ಬೇರೆ ವಿಧವಾದ ಏರ್ಪಾಡು ಮಾಡುವುದಕ್ಕೆ ಸಾಧ್ಯವೇ ?

ಶ್ರೀ ಕಡಿದಾಳ್ ಮಂಜಪ್ಪ.—ಬೇರೆವಿಧವಾದ ಸನ್ನಿವೇಶವಿದ್ದು ಅದಕ್ಕೆ ಅನುಕೂಲವಾಗಿದ್ದರೆ ಮಾಡಬಹುದು.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಎರಡನೆಯ ಪ್ಲಾನಿನಲ್ಲಿ ಸೇರಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಎಸ್ಟಿಮೇಟ್ ಪೂರ್ತಿ ಆದಕೂಡಲೇ ತಕ್ಕ ಕಾರ್ಯಕ್ರಮ ಕೈಗೊಳ್ಳುತ್ತೇವೆ

Sri Kadidal MANJAPPA.—Sir, with your kind permission, I have got a prepared plan of nationalisation for the benefit of the Hon'ble Members because in connection with the privilege question the point was raised.

Mr. SPEAKER.—Yes, it can be placed on the table of the House.